ದಿನಾಂಕಃ 29-08-2023

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ Sri SHB ವಕೀಲರಿಂದಃ**

ನಾನು ಡಿಪ್ಲೊಮೋ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆ ರಾಮಮೂರ್ತಿರವರಿಗೆ ಒಟ್ಟು ಮೂರು ಜನ ಮಕ್ಕಳಿದ್ದು, ನಾನು 2 ನೇ ಮಗನಾಗಿರುತ್ತೇನೆ. ಈ ದಾವೆಯಲ್ಲಿ ಒಟ್ಟು ಎಷ್ಟು ಜನ ಪ್ರತಿವಾದಿಯರಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಮ್ಮ ತಂದೆ ಅವರ ಜೀವಿತ ಕಾಲದಲ್ಲಿ ಅನೇಕ ದಾಖಲೆಗಳನ್ನು ಬರೆದಿದ್ದು , ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿ.ಪಿ.1 ರ ದಾಖಲೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಅದರಲ್ಲಿರುವ ಸಹಿ ಮಾತ್ರ ನನ್ನ ತಂದೆಯದ್ದಾಗಿರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದೊಂದಿಗೆ ನನ್ನ ತಂದೆಯ ಸಹಿ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ನಿ.ಪಿ.1 ರ ಪತ್ರವನ್ನು ಎಲ್ಲಿ ಬರೆಯಲಾಗಿರುತ್ತದೆ ಎಂಬುದರ ಬಗ್ಗೆ ಗೊತ್ತಿರುವುದಿಲ್ಲ. ನಾನು ಸದರಿ ಪತ್ರದಲ್ಲಿರುವ ನನ್ನ ತಂದೆಯ ಸಹಿಯನ್ನು ಮಾತ್ರ ಗುರುತಿಸಬಲ್ಲವನಾಗಿರುತ್ತೇನೆ. ನಿ.ಪಿ.1 ರ ದಿನಾಂಕ , ತಿಂಗಳು ಮತ್ತು ವರ್ಷವನ್ನು ಹೇಳಲು ಬರುವುದಿಲ್ಲ. ನಿಮಗೆ ನಿಮ್ಮ ತಂದೆ ಸದರಿ ವಿಚಾರವನ್ನು ಯಾವ ನಿಖರವಾದ ದಿನಾಂಕದಂದು ಹೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಸದರಿ ದಾಖಲೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಬದಲಾಗಿ ಅದರಲ್ಲಿರುವ ನನ್ನ ತಂದೆಯ ಸಹಿಯನ್ನು ಮಾತ್ರ ಗುರುತಿಸಬಲ್ಲವನಾಗಿರುತ್ತೇನೆಂದು ನುಡಿದಿರುತ್ತಾರೆ.

**ಮರು ವಿಚಾರಣೆಃ**- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.